KADG220017992025

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚನ್ನಗಿರಿ.**

**ಉಪಸ್ಥಿತರು**

**ಶ್ರೀಮತಿ.ಮಹಾಲಕ್ಷ್ಮೀ. ಜಿ**

ಎಂ.ಎ., ಎಲ್.ಎಲ್.ಬಿ.,

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಚನ್ನಗಿರಿ.**

**ದಿನಾಂಕ: 2 ನೇ ಮೇ 2026 ರಂದು ಉಚ್ಚರಿಸಲ್ಪಟ್ಟಿತು.**

**ಅಪರಾಧಿಕ ಪ್ರಕರಣ ಸಂಖ್ಯೆ: 1159 /2025**

**ಕರ್ನಾಟಕ ಸರ್ಕಾರದ ಪರವಾಗಿ ಚನ್ನಗಿರಿ ಪೊಲೀಸ್ ಠಾಣೆ**

........ **ಪಿರ್ಯಾದಿ**

**ವಿರುದ್ಧ**

**1.** **ಶ್ರೀಮತಿ ಶಾಂತಮ್ಮ**
**ಗಂಡ: ನಾಗರಾಜಪ್ಪ**
**ವಯಸ್ಸು: 70 ವರ್ಷ**

**2.** **ಪ್ರದೀಪ**
**ತಂದೆ: ನಾಗರಾಜಪ್ಪ**
**ವಯಸ್ಸು: 41 ವರ್ಷ**

**ಇಬ್ಬರ ವಾಸ: ಉಪ್ಪಾರ ಬೀದಿ**
**ಮಾರುತಿ ಸರ್ಕಲ್ ಹತ್ತಿರ , ಚನ್ನಗಿರಿ**

3. **ಶ್ರೀಮತಿ ಸುಧಾ**
**ತಂದೆಃ ನಾಗರಾಜಪ್ಪ**
**ವಯಸ್ಸು: 49 ವರ್ಷ**
**ವಾಸಃ ಅತ್ತಿಕುಂಡ ಗ್ರಾಮ**
**ಭದ್ರಾವತಿ ತಾಃ**
**ಶಿವಮೊಗ್ಗ ಜಿಃ**

4. **ಶ್ರೀಮತಿ ಸುಮಾ**
**ತಂದೆಃ ಹನುಮಂತಪ್ಪ**
**ವಯಸ್ಸು: 47 ವರ್ಷ**
**ವಾಸಃ ಮಾಶೆಟ್ಟಿಹಳ್ಳಿ ಗ್ರಾಮ ,**
**ಹೊಳೆಹೊನ್ನೂರು ತಾಃ**
**ಶಿವಮೊಗ್ಗ ಜಿಃ**

**........ಆರೋಪಿತರು**

**( ಆರೋಪಿ ಪ ರ ಶ್ರೀ ವಿ ಆರ್ ಆರ್ ವಕೀಲರು**

1. ಅಪರಾಧ ಪ್ರಾರಂಭವಾದ ದಿನಾಂಕ : 02.02.2025
2. ಅಪರಾಧ ವರದಿಯಾದ ದಿನಾಂಕ : 04.02.2025
3. ಅಪರಾಧಿ ಬಂಧನಕಾರಿಯಾದ ದಿನಾಂಕ : ---
4. ದೂರುದಾರರ ಹೆಸರು : ಶ್ರೀಮತಿ ದ್ರಾಕ್ಷಾಯಣಮ್ಮ
5. ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ : 01.04.2026
6. ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ : 01.04.2026
7. ಅಪಾದನೆ ಕಲಂ : **ಭಾರತೀಯ ನ್ಯಾಯ ಸಂಹಿತೆ –2023** ಕಲಂ **115(2), 118(1), 3(5), 351, 352, 74 ರ ಅಡಿಯಲ್ಲಿ**
8. ನ್ಯಾಯಾಧೀಶರ ಅಭಿಪ್ರಾಯ : ನಿರ್ದೋಷಿಗಳು

9. ರಾಜ್ಯ ಸರ್ಕಾರ : ಸ.ಸ.ಅ., ರವರಿಂದ

10. ಆರೋಪಿ ಪರ ವಕೀಲರು : **ಶ್ರೀ ವಿ ಆರ್ ಆರ್ ವಕೀಲರು.**

**(ಶ್ರೀಮತಿ. ಮಹಾಲಕ್ಷ್ಮೀ ಜಿ.)**
**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂಡಾಧಿಕಾರಿಗಳು,**
**ಚನ್ನಗಿರಿ.**

**ತೀರ್ಪು**

ಚನ್ನಗಿರಿ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಆರೋಪಿತರ ಮೇಲೆ **ಭಾರತೀಯ ನ್ಯಾಯ ಸಂಹಿತೆ - 2023** ಕಲಂ **115(2), 118(1), 3(5), 351, 352, 74 ರ ಅಡಿಯಲ್ಲಿ** ದಂಡನೀಯ ಅಪರಾಧವನ್ನು ಎಸಗಿದ್ದಾರೆಂದು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರ.**

ದಿನಾಂಕ 02.02.2025 ರಂದು ಬೆಳಿಗ್ಗೆ 8.45 ಗಂಟೆ ಸಮಯದಲ್ಲಿ ಚನ್ನಗಿರಿ ತಾಲ್ಲೂಕು ಚನ್ನಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿರುವ ಚನ್ನಗಿರಿ ಟೌನ್ ನ ಮಾರುತಿ ಸರ್ಕಲ್ ನಲ್ಲಿರುವ ಚಾಸಾ-1 ರವರ ಮನೆಯ ಮುಂಭಾಗದ ಶೆಡ್ ನಲ್ಲಿ ಚಾಸಾ-2 ರವರು ವ್ಯವಸಾಯದ ಸಾಮ್ಮಾಗ್ರಿಗಳನ್ನು ತೆಗೆದುಕೊಳ್ಳಲು ಹೋದಾಗ 1 ರಿಂದ 4 ನೇ ಆರೋಪಿತರು ಸಮಾನ ಉದ್ದೇಶ ಹೊಂದಿ ಚಾಸಾ-2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಾಡಿ, 2 ನೇ ಆರೋಪಿಯು ಊರುಗೋಲಿನಿಂದ ಚಾಸಾ-2 ರವರ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದಲ್ಲದೇ, ಜಗಳ ಬಿಡಿಸಲು

ಹೋದ ಚಾಸಾ–1 ರವರಿಗೆ 2, 3 ಮತ್ತು 4 ನೇ ಆರೋಪಿತರು ಚಾಸಾ–1 ರವರ ತಲೆ ಕೂದಲು ಹಿಡಿದು ಎಳೆದಾಡಿ ಸಾಮಾನ್ಯ ಸ್ವರೂಪದ ನೋವುಂಟುಪಡಿಸಿದ್ದಲ್ಲದೇ 2, ರಿಂದ 4 ನೇ ಆರೋಪಿತರು ಚಾಸಾ–1 ರವರಿಗೆ 'ಬೇವರ್ಸಿ ಮುಂಡೆ' ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿ, 2 ರಿಂದ 4 ನೇ ಆರೋಪಿತರು ಚಾಸಾ–3 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಾಡಿ ಕುತ್ತಿಗೆ ಇಚುಕಿ ಕೈಕಾಲುಗಳಿಂದ ಚಾಸಾ–3 ರವರ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟುಪಡಿಸಿದ್ದಲ್ಲದೇ, 1 ನೇ ರಿಂದ 4 ನೇ ಆರೋಪಿತರು ಚಾಸಾ–1 ರಿಂದ ಚಾಸಾ–3 ರವರಿಗೆ 'ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲ, ಕೊಲೆ ಮಾಡುತ್ತೇವೆ' ಎಂದು ಜೀವ ಬೆದರಿಕೆ ಹಾಕಿರುತ್ತಾರೆಂಬುದು ಅಭಿಯೋಜನೆಯ ಪ್ರಕರಣವಾಗಿರುತ್ತದೆ.

3. ಘಟನೆಯ ತರುವಾಯ ಚಾಸಾ–1 ರವರು ನೀಡಿದ ದೂರಿನನ್ವಯ ಚಾಸಾ.10 ರವರು ಚನ್ನಗಿರಿ ಪೋಲಿಸ್ ಠಾಣೆ ಗುನ್ನಾ ಸಂಃ 68/2025 ರಂತೆ **ಭಾರತೀಯ ನ್ಯಾಯ ಸಂಹಿತೆ – 2023 ಕಲಂ 352, 351, 115(2), 118(1), 77, 3(5) ರ ಅಡಿಯಲ್ಲಿ** ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು, ಚಾಸಾ.9 ರವರು ಸ್ಥಳ ಪರಿಶೀಲನೆ ಮಾಡಿ ಸಾಕ್ಷಿದಾರರ ಹೇಳಿಕೆಗಳನ್ನು ಕಲೆ ಹಾಕಿ ಆರೋಪಿತರ ಮೇಲೆ **ಭಾರತೀಯ ನ್ಯಾಯ ಸಂಹಿತೆ – 2023 ಕಲಂ 115(2), 118(1), 3(5), 351, 352, 74 ರ ಅಡಿಯಲ್ಲಿ** ದಂಡನೀಯವಾದ ಅಪರಾಧವನ್ನೆಸಗಿರುತ್ತಾರೆಂದು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

4. ಆರೋಪಿತರಿಗೆ ಸಮನ್ಸನ್ನು ಹೊರಡಿಸಿ ಹಾಜರಾತಿಯನ್ನು ಪಡೆಯಲಾಗಿದ್ದು, ಸದರಿಯವರು ಜಾಮೀನನ್ನು ಪಡೆದು ವಿಚಾರಣೆಗೊಳಪಟ್ಟಿರುತ್ತಾರೆ. ತದನಂತರ ಆರೋಪಿತರ ಅಹವಾಲನ್ನು ಆಲಿಸಿ, ದೋಷಾರೋಪಣೆಗಳನ್ನು ರಚಿಸಿ, ಅವರು ತಿಳಿಯುವ ಭಾಷೆಯಲ್ಲಿ ಓದಿ ಹೇಳಿ, ಅವರ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗಿದೆ. ಅವರು ಅವುಗಳನ್ನು ಅಲ್ಲಗಳೆದು ವಿಚಾರಣೆಗೊಳಪಡುವಂತೆ ಕೋರಿದ ಮೇರೆಗೆ ಅಭಿಯೋಜನೆಯ ಸಾಕ್ಷ್ಯಗಳನ್ನು ವಿಚಾರಣೆಗೊಳಪಡಿಸಲಾಗಿರುತ್ತದೆ.

5. ಅಭಿಯೋಜನೆಯು ಅಂತಿಮ ವರದಿಯಲ್ಲಿನ ಒಟ್ಟು 10 ಸಾಕ್ಷಿದಾರರ ಪೈಕಿ 3 ಸಾಕ್ಷಿದಾರರನ್ನು ಫ್ರಾಸಾ.1 ರಿಂದ 3 ರಂತೆ ವಿಚಾರಣೆಗೊಳಪಡಿಸಿರುತ್ತಾರೆ. ಅಲ್ಲದೇ ನಿಪಿ.1 ರಿಂದ 6 ರಂತೆ ದಾಖಲಾತಿ ಸಾಕ್ಷ್ಯಗಳು ಕೂಡ ನಿಶಾನೆಗೊಳಪಟ್ಟಿರುತ್ತವೆ.

6 ಅಭಿಯೋಜನೆಯ ಸಾಕ್ಷ್ಯದ ವಿಚಾರಣೆಯ ಬಳಿಕ, ಅವುಗಳಲ್ಲಿ ಆರೋಪಿಯ ಅಪರಾಧಗಳನ್ನು ಸೂಚಿಸುವ ಸಾಕ್ಷ್ಯಗಳಿಲ್ಲದಿರುವುದರಿಂದ **ಭಾರತೀಯ ನ್ಯಾಯ ಸಂಹಿತೆ – 2023 ಕಲಂ 351** ರ ಅಡಿಯಲ್ಲಿ ಆರೋಪಿತರ ಹೇಳಿಕೆಗಳನ್ನು ವಿನಾಯಿತಿಸಲಾಗಿರುತ್ತದೆ. ಅಲ್ಲದೇ ಇತರೆ ಸಾಕ್ಷಿದಾರರಿಗೆ ಸಮನ್ಸ್ ನ್ನು ಹೊರಡಿಸಲು ಕೇಳಿದ ಅಭಿಯೋಜಕರ ಮನವಿಯನ್ನು ತಿರಸ್ಕರಿಸಲಾಯಿತು.

7. ಮಾನ್ಯ ಅಭಿಯೋಜಕರ ಹಾಗೂ ಆರೋಪಿ ಪರ ವಕೀಲರ ಅಂತಿಮ ವಾದವನ್ನು ಆಲಿಸಲಾಯಿತು. ದಾಖಲಾತಿಗಳನ್ನು ಪರಿಶೀಲಿಸಲಾಯಿತು.

8. ಪ್ರಕರಣದ ತೀರ್ಮಾನಕ್ಕಾಗಿ ಈ ಕೆಳಗಿನಂತೆ ಅಂಶಗಳು ಉದ್ಭವಿಸುತ್ತವೆ

## ಅಂಶಗಳು

1. ಮೊದಲನೆಯದಾಗಿ ದಿ:02-02-2025 ರಂದು ಬೆಳಿಗೆ 8.45 ಗಂಟೆ ಸಮಯದಲ್ಲಿ ಚನ್ನಗಿರಿ ಪಟ್ಟಣದ ಮಾರುತಿ ಸರ್ಕಲ್ ನಲ್ಲಿ ಚಾಸಾ-1 ರವರು ಮನೆಯ ಮುಂಭಾಗದ ಶೆಡ್ ನಲ್ಲಿ ಚಾಸಾ-2 ರವರು ವ್ಯವಸಾಯದ ಸಾಮ್ಗ್ರಿಗಳನ್ನು ತೆಗೆದಕೊಳ್ಳಲು ಹೋದಾಗ 1 ರಿಂದ 4 ನೇ ಅರೋಪಿತರು ಸಮಾನ ಉದ್ದೇಶದಿಂದ ಚಾಸಾ-2 ಮತ್ತು 3 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯುವ ಮೂಲಕ ಭಾ.ನ್ಯಾ.ಸಂ. ಕಲಂ. 352 ಸಹ ವಾಚಕ ಕಲಂ 3(5) ರ ಅಡಿಯಲ್ಲಿ ದಂಡನೀಯ ಅಪರಾಧವನ್ನೆಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸಿದ್ದಾರೆಯೇ?

2. ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ , ಸ್ಥಳ ಹಾಗೂ ಸಮಯದಲ್ಲಿ 2 ನೇ ಅರೋಪಿ ಚಾಸಾ.2 ರವರ ಮೈ ಕೈ ಗೆ ಹೊಡೆದು ಸಾಮಾನ್ಯ ಸವರೂಪದ ಗಾಯ ವುಂಡು ಮಾಡಿದ್ದಲ್ಲದೆ ಚಾಸಾ-3 ರವರ ಕುತ್ತಿಗೆ ಇಚುಕಿ ಕೈಕಾಲುಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ಮಾಡುವ ಮೂಲಕ ಭಾ.ನ್ಯಾ.ಸಂ. ಕಲಂ. 115(2) ನಹ ವಾಚಕ ಕಲಂ 3(5) ರ ಅಡಿಯಲ್ಲಿ ದಂಡನೀಯ ಅಪರಾಧವನ್ನೆಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸಿದ್ದಾರೆಯೇ?

3. ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ , ಸ್ಥಳ ಹಾಗೂ ಸಮಯದಲ್ಲಿ 2 ನೇ ಆರೋಪಿ ಚಾಸಾ-2 ರವರ ತಲೆ ಕೂದಲನ್ನು ಹಿಡಿದು ಎಳೆದಾಡಿ ಅವರ ಮಾನಕ್ಕೆ ಕುಂದುಂಟು ಮಾಡುವ ಮೂಲಕ ಭಾ.ನ್ಯಾ.ಸಂ. ಕಲಂ. 74 ಸಹ ವಾಚಕ ಕಲಂ 3(5) ರ ಅಡಿಯಲ್ಲಿ ದಂಡನೀಯ ಅಪರಾಧವನ್ನೆಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸಿದ್ದಾರೆಯೇ?

4. ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ , ಸ್ಥಳ ಹಾಗೂ ಸಮಯದಲ್ಲಿ 2 ನೇ ಅರೋಪಿ ಚಾಸಾ-2 ರವರಿಗೆ ಊರುಗೋಲಿನಿಂದ ಹೊಡೆದಿರುವುದರಿಂದ ಮೂಲಕ ಭಾ.ನ್ಯಾ.ಸಂ. ಕಲಂ. 118(1) ಸಹ ವಾಚಕ ಕಲಂ 3(5) ರ ಅಡಿಯಲ್ಲಿ ದಂಡನೀಯ ಅಪರಾಧವನ್ನೆಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸಿದ್ದಾರೆಯೇ?

5. ಕೊನೆಯದಾಗಿ ಮೇಲೆ ತಿಳಿಸಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ 1 ರಿಂದ 4 ನೇ ಚಾಸಾ-1 ರಿಂದ 3 ರವರಿಗೆ "ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲ ಕೊಲೆ ಮಾಡುತ್ತೇವೆ" ಎಂದು ಜೀವ ಬೆದರಿಕೆ ಹಾಕಿರುವುದರಿಂದ ಭಾ.ನ್ಯಾ.ಸಂ. ಕಲಂ. 351 ಸಹ ವಾಚಕ ಕಲಂ 3(5) ರ ಅಡಿಯಲ್ಲಿ ದಂಡನೀಯ ಅಪರಾಧವನ್ನೆಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸಿದ್ದಾರೆಯೇ?

6. ಆದೇಶ ಏನು?

9. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿದೆ.

ಅಂಶ ಸಂಖ್ಯೆ 1 ರಿಂದ 5 : ನಕಾರಾತ್ಮಕವಾಗಿ,
ಅಂಶ ಸಂಖ್ಯೆ 6 : ಅಂತಿಮ ಆದೇಶದಂತೆ ಈ

ಕೆಳಕಂಡ ಕಾರಣಗಳಿಗಾಗಿ

## <u>ಕಾರಣಗಳು</u>

10. **<u>ಅಂಶ ಸಂಖ್ಯೆ 1 ರಿಂದ 5</u>** : ಈ ಎಲ್ಲಾ ಅಂಶಗಳು ಒಂದೇ ಘಟನೆಗೆ ಸಂಬಂಧಿಸಿದ್ದರಿಂದ, ಸಂಗತಿಗಳ ಮತ್ತು ಸಾಕ್ಷ್ಯಗಳ ಹಾಗೂ ಅವುಗಳಿಗೆ ನೀಡಲಾಗುವ ಕಾರಣಗಳ ಪುನರಾವರ್ತನೆ ತಪ್ಪಿಸುವ ಸಲುವಾಗಿ, ಸದರಿ ಅಂಶಗಳನ್ನು ಒಟ್ಟಾಗಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

11. ಆರೋಪಿತರ ಮೇಲಿನ ಅಪರಾಧವನ್ನು ಸೂಚಿಸುವ ಎಲ್ಲಾ ಅಂಶಗಳನ್ನು ರುಜುವಾತು ಮಾಡಲು ಅಂತಿಮ ವರದಿಯಲ್ಲಿನ ಒಟ್ಟು 10 ಸಾಕ್ಷಿದಾರರ ಪೈಕಿ 3 ಸಾಕ್ಷ್ಯಿದಾರರನ್ನು ಫ್ರಾಸಾ.1 ರಿಂದ 3 ರಂತೆ ಅಭಿಯೋಜನೆಯವರು ವಿಚಾರಣೆಗೊಳಪಡಿಸಿರುತ್ತಾರೆ. ಅದರಂತೆ ದೂರುದಾರರಾದ ಚಾಸಾ1 ಧ್ರಾಕ್ಷಾಯಣಮ್ಮ ರವರನ್ನು ಫ್ರಾಸಾ.1 ರಂತೆ , ಬಾಧಿತ ಸಾಕ್ಷಿದಾರರಾದ ಚಾಸಾ.2 ನಾಗರಾಜಪ್ಪ ಮತ್ತು ಚಾಸಾ.3 ಆನಂದ ರವರನ್ನು ಅಭಿಯೋಜನೆಯು ಫ್ರಾಸಾ.2 ಮತ್ತು 3 ರಂತೆ ವಿಚಾರಣೆಗೊಳಪಡಿಸಿರುತ್ತಾರೆ.

12. ಈ ಮೇಲಿನ ಸಾಕ್ಷಿಗಳ ವಿಚಾರಣೆಯ ಕಾಲಕ್ಕೆ ಗುರುತಿಗೊಳಪಟ್ಟ ದಾಖಲೆಗಳು ನಿಪಿ.1 ರಿಂದ 6 ರಂತಿದ್ದು, ನಿಪಿ.1/ದೂರು, ನಿಪಿ.1(ಎ)/ಸಹಿ, ನಿಪಿ.2/ಕೃತ್ಯ ನಡೆದ ಸ್ಥಳ ಪಂಚನಾಮೆ, ನಿಪಿ.2(ಎ)/ಸಹಿ, ನಿಪಿ.3 ಮತ್ತು 4/ಭಾವಚಿತ್ರಗಳು, ನಿಪಿ.5 ಮತ್ತು 6/ಚಾಸಾ.2 ಮತ್ತು 3ರವರ ಅಲ್ಲಗಳೆದ ಹೇಳಿಕೆಗಳಾಗಿವೆ.

13. ಪ್ರಸ್ತುತ ಪ್ರಕರಣದಲ್ಲಿ ಆರೋಪಿತರ ಮೇಲೆ ಆರೋಪಿಸಲಾಗಿರುವ ಆರೋಪಗಳನ್ನು ಸಾಬೀತುಪಡಿಸಲು ಅಭಿಯೋಜನೆಯು ದೂರುದಾರರಾದ ಚಾಸಾ.1 ಧ್ರಾಕ್ಷಾಯಣಮ್ಮರವರನ್ನು ಫ್ರಾಸಾ.1 ರಂತೆ ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ-2 ತನ್ನ ಗಂಡ, ಚಾಸಾ-3 ಮತ್ತು 4 ತನ್ನ ಮಕ್ಕಳು.ಚಾಸಾ-5 ತನ್ನ ಮೈದುನ, ಚಾಸಾ-6 ಮತ್ತು 7 ತನಗೆ ಪರಿಚಿತರು. ಆರೋಪಿತರು ತನ್ನ ಸಂಬಂಧಿಕರು. ಅರೋಪಿತರು ತನಗೆ ಬೈಯ್ದಿಲ್ಲ, ಕೈ ಕಾಲು ಮತ್ತು ಊರುಗೋಲಿನಿಂದ ಹಲ್ಲೆ ಮಾಡಿಲ್ಲ. ಸಾರ್ವಜನಿಕವಾಗಿ ಅವಮಾನಪಡಿಸಿಲ್ಲ ಕೊಲೆ ಬೆದರಿಕೆ ಹಾಕಿಲ್ಲ. ಆರೋಪಿಗೂ ಮತ್ತು ತನಗೆ ಬಾಯಿ ಮಾತಿನ ಜಗಳವಾಗಿದ್ದು ಬಗೆಹರಿಸಿಕೊಳ್ಳಲು ತಾನು ಠಾಣೆಗೆ ಹೋಗಿದ್ದಾಗ ಪೋಲೀಸರು ಕೆಲವು ದಾಖಲೆಗಳ ಮೇಲೆ ತನ್ನ ಸಹಿಗಳನ್ನು ಪಡೆದಿರುವುದಾಗಿ, ಅವುಗಳು ಯಾವ ದಾಖಲೆಗಳು ಎಂದು ತನಗೆ ಗೊತ್ತಿಲ್ಲ. ತಾನು ಚಿಕಿತ್ಸೆಯನ್ನು ಪಡೆದುಕೊಂಡಿಲ್ಲ. ನಿಪಿ-1 ರಂತೆ ನಿಶಾನೆಗೊಳಗಾದ ದೂರಿನಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ದೂರಿನಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ, ಅದನ್ನು ಯಾರು, ಯಾವ ಕಾರಣಕ್ಕಾಗಿ ಬರೆದರು ಎಂದು ಗೊತ್ತಿಲ್ಲ. ನಿಪಿ- 2 ರಂತೆ ನಿಶಾನೆಗೊಳಗಾದ ಸ್ಥಳ ಮತ್ತು ಅಮಾನತ್ತು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಅದು ಯಾವ ದಾಖಲೆ ಎಂದು ಗೊತ್ತಿಲ್ಲ, ಸದರಿ ಮಹಜರ್ ನಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ. ಅದನ್ನು ಯಾರು, ಯಾವ ಕಾರಣಕ್ಕಾಗಿ ಬರೆದರು ಗೊತ್ತಿಲ್ಲ. ಪೋಲೀಸರು

ಏನನ್ನೂ ವಶಪಡಿಸಿಕೊಂಡಿಲ್ಲ. ನಿಪಿ–3 ಮತ್ತು 4 ರಂತೆ ನಿಶಾನೆಗೊಳಗಾದ ಭಾವಚಿತ್ರದಲ್ಲಿ ತಾನು ಪೋಲೀಸರ ಕೋರಿಕೆ ಮೇರೆಗೆ ನಿಂತಿರುವುದಾಗಿ ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

14. ಸದರಿ ಸಾಕ್ಷಿಯನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀ ಸವಾಲಿಗೆ ಒಳಪಡಿಸಿದಾಗ ಆರೋಪಿತರ ಮೇಲೆ ಆರೋಪಿಸಲಾಗಿರುವ ಆರೋಪಗಳನ್ನು ದೃಢಪಡಿಸುವಂತಹ ಅಭಿಯೋಜಕರು ಸೂಚಿಸಿದ ಎಲ್ಲಾ ಸೂಚನೆಗಳನ್ನು ಸಾಕ್ಷಿ ಅಲ್ಲಗಳೆದಿರುತ್ತಾರೆ.

15. ಈ ಪ್ರಕರಣದ ಬಾಧಿತ ಸಾಕ್ಷಿದಾರರಾದ ಚಾಸಾ.2 ನಾಗರಾಜಪ್ಪ ಮತ್ತು ಚಾಸಾ.3 ಆನಂದ ರವರನ್ನು ಅಭಿಯೋಜನೆಯು ಫ್ರಾಸಾ.2 ಮತ್ತು 3 ರಂತೆ ವಿಚಾರಣೆಗೊಳಪಡಿಸಿರುತ್ತಾರೆ. ಅದರಂತೆ ಫ್ರಾಸಾ.2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ–1 ತನ್ನ ಹೆಂಡತಿ, ಚಾಸಾ–3 ಮತ್ತು 4 ತನ್ನ ಮಕ್ಕಳು. ಚಾಸಾ–5 ತನ್ನ ತಮ್ಮ, ಚಾಸಾ–6 ಮತ್ತು 7 ರವರು ತನಗೆ ಪರಿಚಿತರು. ಆರೋಪಿತರು ತನ್ನ ಹೆಂಡತಿ ಮತ್ತು ಮಕ್ಕಳು. ಆರೋಪಿತರು ತನ್ನ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ, ಯಾವುದೇ ಹೇಳಿಕೆ ನೀಡಿಲ್ಲ, ಮತ್ತು ತಾನು ಯಾವುದೇ ಚಿಕಿತ್ಸೆ ಪಡೆದಿಲ್ಲವೆಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

16. ಸದರಿ ಸಾಕ್ಷಿಯನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ನ್ಯಾಯಾಲಯದ ಅನುಮತಿಯ ಮೇರೆಗೆ

ಪಾಟೀ ಸವಾಲಿಗೆ ಒಳಪಡಿಸಿದಾಗ ಆರೋಪಿತರ ಮೇಲೆ ಆರೋಪಿಸಲಾಗಿರುವ ಆರೋಪಗಳನ್ನು ದೃಢಪಡಿಸುವಂತಹ ಅಭಿಯೋಜಕರು ಸೂಚಿಸಿದ ನಿಪಿ. 5 ರಂತೆ ನಿಶಾನೆಗೊಳಗಾದ ಹೇಳಿಕೆಯಲ್ಲಿನ ಎಲ್ಲಾ ಸೂಚನೆಗಳನ್ನು ಸಾಕ್ಷಿ ಅಲ್ಲಗಳೆದಿರುತ್ತಾರೆ.

17. ಅದರಂತೆ ಫ್ರಾಸಾ.3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ–1 ಮತ್ತು 2 ತನ್ನ ತಂದೆ – ತಾಯಿ, ಚಾಸಾ– 4 ತನ್ನ ಅಣ್ಣ, ಚಾಸಾ–5 ತನ್ನ ಚಿಕ್ಕಪ್ಪ, ಚಾಸಾ–6 ಮತ್ತು 7 ತನಗೆ ಪರಿಚಿತರು. ಆರೋಪಿತರು ತನ್ನ ಸಂಬಂಧಿಕರು. ಅರೋಪಿತರು ತನ್ನ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ, ಯಾವುದೇ ಹೇಳಿಕೆ ನೀಡಿಲ್ಲ, ಮತ್ತು ತಾನು ಯಾವುದೇ ಚಿಕಿತ್ಸೆ ಪಡೆದಿಲ್ಲವೆಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

18. ಸದರಿ ಸಾಕ್ಷಿಯನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀ ಸವಾಲಿಗೆ ಒಳಪಡಿಸಿದಾಗ ಆರೋಪಿತರ ಮೇಲೆ ಆರೋಪಿಸಲಾಗಿರುವ ಆರೋಪಗಳನ್ನು ದೃಢಪಡಿಸುವಂತಹ ಅಭಿಯೋಜಕರು ಸೂಚಿಸಿದ ನಿಪಿ.6 ರಂತೆ ನಿಶಾನೆಗೊಳಗಾದ ಹೇಳಿಕೆಯಲ್ಲಿನ ಎಲ್ಲಾ ಸೂಚನೆಗಳನ್ನು ಸಾಕ್ಷಿ ಅಲ್ಲಗಳೆದಿರುತ್ತಾರೆ.

19. ಈ ಎಲ್ಲಾ ಸಾಕ್ಷ್ಯಾಧಾರಗಳನ್ನು ಕ್ರೋಢೀಕರಿಸಿ ಕೂಲಂಕುಷವಾಗಿ ಪರಿಶೀಲಿಸಲಾಗಿ ಪ್ರಾ.ಸಾ.1 ರಿಂದ 3 ರವರು ತಾವು ಕೊಟ್ಟ ದೂರು, ಮಹಜರ್ ಮತ್ತು ಹೇಳಿಕೆಗಳಿಗೆ ತದ್ವಿರುದ್ಧವಾಗಿ ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯವನ್ನು ನುಡಿದಿದ್ದು, ಫ್ರಾಸಾ.1 ರಿಂದ 3 ರವರು ಸಂಪೂರ್ಣವಾಗಿ ಪ್ರತಿಕೂಲ

ಸಾಕ್ಷಿದಾರರೆಂದು ಪರಿಗಣಿಸಿ ಅಭಿಯೋಜನೆಯು ಪಾಟೀಸವಾಲು ಮಾಡಿದರೂ ಸಹ ನಿಪಿ.1 ರಿಂದ 6 ರಲ್ಲಿರುವ ದಾಖಲೆಗಳಲ್ಲಿನ ಅಂಶಗಳನ್ನು ಹೊರತರುವಲ್ಲಿ ವಿಫಲರಾಗಿರುತ್ತಾರೆ. ಅಲ್ಲದೇ ಫ್ರಾಸಾ.1 ರಿಂದ 3 ರವರು ತಮ್ಮ ದಾಖಲಾತಿ ಸಾಕ್ಷ್ಯಗಳಿಗೆ ಸಂಪೂರ್ಣವಾಗಿ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ.

20. ಅಪರಾಧಿಕ ನ್ಯಾಯಶಾಸ್ತ್ರದ ಸಿದ್ಧಾಂತದಂತೆ ಅಪರಾಧಿಯನ್ನು ನಿರ್ದೋಷಿಯೆಂದು ಪೂರ್ವಭಾವನೆಯೊಂದಿಗೆ ಕಾಣಬೇಕಾಗುತ್ತದೆ. ಆರೋಪಿತರ ಮೇಲೆ ಹೊರಿಸಲಾದಂತಹ ದೋಷಾರೋಪಣೆಗಳನ್ನು ಸಂಶಯಾತೀತವಾಗಿ ರುಜುವಾತು ಪಡಿಸುವವರೆಗೂ, ಅವರು ನಿರ್ದೋಷಿಯೆಂಬ ಪೂರ್ವ ಕಲ್ಪನೆ ಕಾನೂನಿನಲ್ಲಿ ಇರುತ್ತದೆ. ಸದರಿ ಪೂರ್ವ ಭಾವನೆಯನ್ನು ತೊಡೆದು ಹಾಕಿ ಆರೋಪಿತರ ಮೇಲಿನ ಅಪರಾಧಗಳನ್ನು ರುಜುವಾತು ಪಡಿಸುವುದು ಅಭಿಯೋಜನೆಯ ಹೊಣೆಗಾರಿಕೆ ಮತ್ತು ರುಜುವಾತಿನ ಭಾರವಾಗಿದ್ದು, ಅಭಿಯೋಜನೆಯವರು ತಮ್ಮ ಸದರಿ ಹೊಣೆಗಾರಿಕೆಯನ್ನು ಸಂಶಯಾತೀತವಾಗಿ ರುಜುವಾತುಪಡಿಸಬೇಕಾಗುತ್ತದೆ. ಅಭಿಯೋಜನೆಯ ಪ್ರಕರಣದಲ್ಲಿ ಕಂಡು ಬರತಕ್ಕಂತಹ ಸಂಶಯದ ಲಾಭಗಳನ್ನು ಆರೋಪಿತರಿಗೆ ಕೊಡಮಾಡುವುದು ನ್ಯಾಯಶಾಸ್ತ್ರದ ಸಿದ್ಧಾಂತವಾಗಿದ್ದು ಮತ್ತು ಅದು ಕಾನೂನಾತ್ಮಕವಾಗಿರುತ್ತದೆ. ಅದ್ದರಿಂದ ಅಭಿಯೋಜನೆಯು ಈ ಪ್ರಕರಣದಲ್ಲಿ ಆರೋಪಿತರ ಮೇಲೆ ಆರೋಪಿಸಲಾದ ಆರೋಪಗಳನ್ನು ಸಂದೇಹಾತೀತವಾಗಿ ಸಾಬೀತು ಪಡಿಸಲು ವಿಫಲವಾಗಿದೆ ಎಂದು ಅಭಿಪ್ರಾಯ ಪಡುತ್ತಾ **1 ರಿಂದ 5 ನೇ ಅಂಶಗಳನ್ನು ನಕಾರಾತ್ಮಕವಾಗಿ** ಈ ನ್ಯಾಯಾಲಯವು ಉತ್ತರಿಸುತ್ತದೆ.

21. **<u>ಅಂಶ ಸಂಖ್ಯೆ 6:-</u>** ಅಂಶ ಸಂಖ್ಯೆ 1 **ರಿಂದ 5** ರಲ್ಲಿ ತಿಳಿಸಿರುವ ಕಾರಣಗಳಿಂದಾಗಿ ಈ ಕೆಳಗಿನ ಅಂತಿಮ ಆದೇಶ ಮಾಡಲಾಗಿದೆ.

## ಆದೇಶ

**ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ -2023 ಕಲಂ 271(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಭಾರತೀಯ ನ್ಯಾಯ ಸಂಹಿತೆ - 2023 ಕಲಂ 115(2), 118(1), 351, 352, 74 ಸಹ ಕಲಂ 3(5) ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಗಳಿಗೆ ಆರೋಪಿಯನ್ನು ನಿರಪರಾಧಿಯೆಂದು ತೀರ್ಮಾನಿಸಿ ಬಿಡುಗಡೆ ಮಾಡಲಾಗಿದೆ.**

**ಆರೋಪಿ ಮತ್ತು ಜಾಮೀನುದಾರನ ಮುಚ್ಚಳಿಕೆಗಳನ್ನು ಮೇಲ್ಮನವಿ ಅವಧಿಯ ತರುವಾಯ ರದ್ದು ಪಡಿಸುವಂತೆ ಆದೇಶಿಸಲಾಗಿದೆ.**

(ಮೇಲಿನ ತೀರ್ಪನ್ನು ಶೀಘ್ರಲಿಪಿಗಾರಳಿಗೆ ಉಖ್ತಲೇಕನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ತಿದ್ದುಪಡಿ ಮಾಡಿ ಈ ದಿನ ಅಂದರೆ ದಿನಾಂಕ: **2 ನೇ ಮೇ** 2026 ರಂದು ತೆರೆದ ನ್ಯಾಯಾಲಯದಲ್ಲಿ ಉಚ್ಚರಿಸಲ್ಪಟ್ಟಿತ್ತು)

**(ಶ್ರೀಮತಿ. ಮಹಾಲಕ್ಷ್ಮೀ ಜಿ.)**
**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂಡಾಧಿಕಾರಿಗಳು,**
**ಚನ್ನಗಿರಿ.**

**:ಅನುಬಂಧ:**

1. **<u>ಅಭಿಯೋಜನೆಯ ಪರವಾಗಿ ವಿಚಾರಿಸಿಕೊಂಡ ಸಾಕ್ಷಿದಾರರ ವಿವರ:</u>**

ಪಿಡಬ್ಲೂ-1 : ಧ್ರಾಕ್ಷಾಯಣಮ್ಮ
ಪಿಡಬ್ಲೂ-2 : ನಾಗರಾಜಪ್ಪ
ಪಿಡಬ್ಲೂ-3 : ಆನಂದ

2. **ಅಭಿಯೋಜನೆಯ ಪರವಾಗಿ ಗುರುತಿಸಿದ ದಾಖಲಾತಿಗಳ ವಿವರಃ**

ನಿಪಿ.1: ದೂರು,

ನಿಪಿ.1(ಎ): ಸಹಿ,

ನಿಪಿ.2: ಕೃತ್ಯ ನಡೆದ ಸ್ಥಳ ಅಮಾನತ್ತು ಪಂಚನಾಮೆ,

ನಿಪಿ.2(ಎ): ಸಹಿ,

ನಿಪಿ.3 ಮತ್ತು 4: ಭಾವಚಿತ್ರಗಳು,

ನಿಪಿ.5: ಚಾಸಾ.2 ಮತ್ತು 3 ರವರ ಅಲ್ಲಗಳೆದ ಹೇಳಿಕೆಗಳು

3. **ಆರೋಪಿ ಪರವಾಗಿ ವಿಚಾರಿಸಿಕೊಂಡ ಸಾಕ್ಷಿದಾರರ ವಿವರಃ**

ಇಲ್ಲ

4. **ಆರೋಪಿ ಪರವಾಗಿ ಗುರುತಿಸಿಕೊಂಡ ದಾಖಲೆಗಳ ವಿವರಃ**

ಇಲ್ಲ

5. **ಮುದ್ದೆಮಾಲಿನ/ಜಪ್ ತಂದೇಃ ವಸ್ತುಗಳ ಬಗ್ಗೆ ವಿವರಃ**

**ಇಲ್ಲ**

**(ಶ್ರೀಮತಿ. ಮಹಾಲಕ್ಷ್ಮೀ. ಜಿ)**
**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂಡಾಧಿಕಾರಿಗಳು,**
**ಚನ್ನಗಿರಿ.**